ಸಾಕ್ಷಿಯನ್ನು ದಿನಾಂಕಃ 04/12/2024 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ನಂ.1 ಮತ್ತು 2 ರ ಪರ ವಕೀಲರಿಂದಃ**

ನನ್ನ ಗಂಡ ಒಕ್ಕಲುತನ ಕೆಲಸ ಮಾಡುತ್ತಿದ್ದರು. ನನ್ನ ಗಂಡನ ಆಸ್ತಿ ನವಲಗುಂದ ತಾಲೂಕ ತಲೆಮೊರಬ ಗ್ರಾಮದಲ್ಲಿ ಇದೆ ಎಂದರೆ ಸರಿ. ನನ್ನ ಗಂಡನಿಗೆ ಸೇರಿದ 2 ಕೂರಿಗೆ ಹೊಲ ಇದೆ. ನನಗೆ ಒಟ್ಟು ಇಬ್ಬರು ಗಂಡು ಮಕ್ಕಳು, ಒಬ್ಬ ಮಗಳು ಇದ್ದಾಳೆ. 1 ನೇ ವಾದಿಯನ್ನು ಶ್ಯಾಗೋಟಿ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದೇವೆ ಎಂದರೆ ಸರಿ. ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ. ತಿಪ್ಪವ್ವನ ಮಗ ಆತ್ಮಹತ್ಯೆ ಮಾಡಿಕೊಂಡು ತೀರಿಕೊಂಡಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಅವರಿಗೆ ಆರೋಗ್ಯ ಸರಿ ಇರಲಿಲ್ಲ ತೀರಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಸದರಿ ತಿಪ್ಪವ್ವನ ಮಗ ಕುಡಿತದ ಚಟಕ್ಕೆ ಒಳಗಾಗಿ , ಇಸ್ಪೇಟ್ ಆಡುತ್ತಿದ್ದ ಅದರಿಂದ ಸಾಕಷ್ಟು ಸಾಲ ಮಾಡಿದ್ದ ಎಂದರೆ ಸರಿಯಲ್ಲ. ಸಾಲಗಾರರ ಕಾಟಕ್ಕೆ ಆತ ಆತ್ಮಹತ್ಯೆ ಮಾಡಿಕೊಂಡಿದ್ದ ಎಂದರೆ ಸರಿಯಲ್ಲ.

ತಿಪ್ಪವ್ವಳ ಗಂಡನ ಹೆಸರು ಬಸನಗೌಡ. ಸದರಿ ಬಸನಗೌಡ 1986 ರಿಂದ 1992 ರವರೆಗೆ ಒಣಮೆಣಸಿನಕಾಯಿ ವ್ಯಾಪಾರ ಮಾಡುತ್ತಿದ್ದ ಎಂದರೆ ಸರಿಯಲ್ಲ. ಬಸನಗೌಡ ಒಕ್ಕಲುತನ ಮಾಡುತ್ತಿದ್ದರು. ನಿಮ್ಮ ತಂದೆ ಮತ್ತು ನಿಮ್ಮ ಸಹೋದರ ಸದರಿ ಬಸನಗೌಡನಿಗೆ ಒಣಮೆಣಸಿನಕಾಯಿ ವ್ಯಾಪಾರ ಮಾಡಿ ಎಂದು ಸಲಹೆ ನೀಡಿದ್ದರು ಎಂದರೆ ಸರಿಯಲ್ಲ. ನಿಮ್ಮ ತಂದೆ ಮತ್ತು ಸಹೋದರ ಬೇರೆಯವರ ಕಡೆಯಿಂದ ಸಾಲ ಮಾಡಿ ಒಣಮೆಣಸಿನಕಾಯಿ ತಂದುಕೊಟ್ಟು, ಬಸನಗೌಡನಿಗೆ ವ್ಯಾಪಾರ ಮಾಡಲು ಸಹಾಯ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಬಸನಗೌಡ ಸದರಿ ವ್ಯಾಪಾರ ಸರಿಯಾಗಿ ಮಾಡದೆ ನಷ್ಟ ಅನುಭವಿಸದ್ದರಿಂದ ನಿಮ್ಮ ತಂದೆ ಮತ್ತು ನಿಮ್ಮ ಸಹೋದರನಿಗೆ ನಷ್ಟ ಉಂಟಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಷಯ ತಿಪ್ಪವ್ವಳಿಗೆ ಸರಿಯಾಗಿ ಗೊತ್ತಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ವಿಷಯ ನಿಮಗೂ ಗೊತ್ತಿದೆ ಮತ್ತು ನಿಮ್ಮ

ತಿಪ್ಪವ್ವಳಿಗೂ ಗೊತ್ತಿದೆ, ಆದರೂ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಉದ್ರಿಯಲ್ಲಿ ಒಣಮೆಣಸಿನಕಾಯಿ ಕೊಡಿಸಿದ್ದರಿಂದ ಸಾಲಗಾರರು ತಿಪ್ಪವ್ವಳ ಮನೆಗೆ ಬರುತ್ತಿದ್ದರು ಎಂದರೆ ಸರಿಯಲ್ಲ. ಸಾಲಗಾರರು ಬಂದು ಹೋದ ಬಗ್ಗೆ ನಿಮಗೆ ವೈಯಕ್ತಿಕವಾಗಿ ಗೊತ್ತಿಲ್ಲ, ತಿಪ್ಪವ್ವಳಿಗೆ ಗೊತ್ತಿದೆ ಎಂದರೆ ಅವರ ಮನೆಗೆ ಯಾರು ಸಾಲಗಾರರು ಬಂದಿಲ್ಲ ಎಂದು ಹೇಳುತ್ತಾರೆ. ಇದ ಸಾಲಗಾರರ ಕಾಟಕ್ಕೆ ಮಾನಸಿಕವಾಗಿ ತಿಪ್ಪವ್ವಳ ಗಂಡ ಅನಾರೋಗ್ಯದಿಂದ ತೀರಿಕೊಂಡರು ಎಂದರೆ ಸಾಕ್ಷಿ ಅನಾರೋಗ್ಯದಿಂದ ತೀರಿಕೊಂಡರು ಎಂದು ಹೇಳುತ್ತಾರೆ. ಆಕೆಯ ಗಂಡ ತೀರಿಕೊಂಡ ನಂತರ ಸಾಲಗಾರರ ಕಾಟಕ್ಕೆ ತಿಪ್ಪವ್ವ 2-3 ವರ್ಷದ ಹಿಂದೆ ತವರುಮನೆಗೆ ಬಂದು ಉಳಿದಳು ಎಂದರೆ ಸಾಕ್ಷಿ ಅವರು ತವರುಮನೆಗೆ ಬಂದಿಲ್ಲ ಎಂದು ಹೇಳುತ್ತಾರೆ. ಸದರಿ ಸಾಲ ತೀರಿಸಲು ಮತ್ತು ತನ್ನ ಅಕ್ಕನಿಗೆ ಸಹಾಯ ಮಾಡಲು ಚನ್ನಬಸ್ಸಪ್ಪ ಎಲ್ಲಾ ಆಸ್ತಿಯ ಮೇಲೆ ಸ್ವಲ್ಪ ಸ್ವಲ್ಪ ಸಾಲ ಮಾಡಿದ್ದರು ಎಂದರೆ ಸರಿಯಲ್ಲ. ನಿಮ್ಮ ಅಪ್ಪ ತೀರಿಕೊಂಡ ನಂತರ ಮನೆತನದ ಎಲ್ಲಾ ಜವಬ್ದಾರಿ ಚನ್ನಬಸಪ್ಪ ರವರ ಮೇಲೆ ಇತ್ತು ಎಂದರೆ ಸರಿ. ಚನ್ನಬಸಪ್ಪ ದಾವಾ ಆಸ್ತಿಗಳ ಮೇಲೆ ಯಾವ ಕಾರಣಕ್ಕೆ ಸಾಲ ಮಾಡಿದ್ದಾರೆ ಎಂದು ನಿಮಗೂ ಮತ್ತು ತಿಪ್ಪವ್ವಳಿಗೂ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಸಾಲ ತೀರಿಸಲು ಸದರಿ ಚನ್ನಬಸಪ್ಪ ತೀರಿಕೊಂಡ ನಂತರ ಅವರ ಹೆಂಡತಿ ಎರಡನೇ ಪ್ರತಿವಾದಿ ರಿ.ಸ. ನಂ. 24/1 ಅ ಆಸ್ತಿಯನ್ನು ಮೂರನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೇ ಸಾಕ್ಷಿ ನಮಗೆ ಹೇಳದೆ ಕೇಳದೆ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ಮಾರಾಟ ಮಾಡುವಾಗ ನಿಮಗೆ ಮತ್ತು ತಿಪ್ಪವ್ವಳಿಗೆ ತಿಳಿಸಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಗಿರಿಮಲ್ಲಪ್ಪ ಇದ್ದಾಗ ನೀವು ಮತ್ತು ನಿಮ್ಮ ಅಕ್ಕ ಆಗಾಗ ತವರುಮನೆಗೆ ಬಂದು ನಿಮ್ಮ ಅಡಚಣೆಗಾಗಿ ಹಣ ಇಸಿದುಕೊಂಡು ಹೋಗುತ್ತಿದ್ದೀರಿ ಎಂದರೆ ಸಾಕ್ಷಿ ನನ್ನ ತಂದೆ ತೀರಿಕೊಂಡ ನಂತರ ನನ್ನ ಮದುವೆ ಆಗಿದೆ ಎಂದು ಹೇಳುತ್ತಾರೆ. ನಿಮ್ಮ ಲಗ್ನ ಆದ ನಂತರ ಸಹ ಚನ್ನಬಸಪ್ಪ ಕಡೆಯಿಂದ ಹಣ ತೆಗೆದುಕೊಂಡು ಹೋಗುತ್ತಿದ್ದೀರಿ ಎಂದರೆ ಸರಿಯಲ್ಲ.

ನೀವು ಮತ್ತು ನಿಮ್ಮ ಅಕ್ಕ ತಿಪ್ಪವ್ವ ಚನ್ನಬಸಪ್ಪ ಕಡೆಯಿಂದ 10-15 ಲಕ್ಷ ತೆಗೆದುಕೊಂಡು ಹೋಗಿದ್ದೀರಿ ಎಂದರೆ ಸರಿಯಲ್ಲ. ಆಸ್ತಿ ಮಾರಾಟ ಮಾಡಿದ್ದರಿಂದ ತಿಪ್ಪವ್ವಳಿಗೆ ಮಾತ್ರ ಲಾಭ ಆಗಿದೆ, ಉಳಿದ ಪಕ್ಷಗಾರರಿಗೆ ಲಾಭ ಆಗಿಲ್ಲ ಎಂದರೆ ಸರಿಯಲ್ಲ. ತವರುಮನೆಯಲ್ಲಿ ಎರಡು ಮನೆಗಳು ಇವೆ. ನಿಮ್ಮ ತಂದೆ ಜೀವಂತ ಇದ್ದಾಗ ಎರಡು ಮನೆಗಳು ಮಡಗಿ ಮನೆಗಳು ಇದ್ದವು ಎಂದರೆ ಸರಿ. ವಿಪಿಸಿ ನಂ.396 ಈ ಮನೆಯನ್ನು ರಿಪೇರಿ ಮಾಡಲು 3 ಲಕ್ಷ ಚನ್ನಬಸಪ್ಪ ವೆಚ್ಚ ಮಾಡಿದ್ದಾರೆ, ಈ ವಿಷಯ ನಿಮಗೂ ಮತ್ತು ತಿಪ್ಪವ್ವಳಿಗೂ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ ಮನೆ ರಿಪೇರಿ ಮಾಡಿಸಲು ನಿಮಗೆ ಮತ್ತು ತಿಪ್ಪವ್ವಳಗೆ ಕೇಳಿ ಬ್ಯಾಂಕಿನಿಂದ ಸಾಲ ಮಾಡಿದ್ದಾರೆ ಎಂದರೆ ಸರಿಯಲ್ಲ. ವಿಪಿಸಿ ನಂ.397 ಈ ಮನೆಯನ್ನು ರಿಪೇರಿ ಮಾಡಲು 20 ಲಕ್ಷ ಚನ್ನಬಸಪ್ಪ ವೆಚ್ಚ ಮಾಡಿದ್ದಾರೆ, ಈ ವಿಷಯ ನಿಮಗೂ ಮತ್ತು ತಿಪ್ಪವ್ವಳಿಗೂ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ ಮನೆ ರಿಪೇರಿ ಮಾಡಿಸಲು ನಿಮಗೆ ಮತ್ತು ತಿಪ್ಪವ್ವಳಗೆ ಕೇಳಿ ಬ್ಯಾಂಕಿನಿಂದ ಸಾಲ ಮಾಡಿದ್ದಾರೆ ಎಂದರೆ ಸರಿಯಲ್ಲ. ಚನ್ನಬಸಪ್ಪ ತೀರಿಕೊಂಡ ನಂತರ ಈ ಆಸ್ತಿಯಲ್ಲಿ ಪಾಲು ಕೇಳಲು ಬಂದಿದ್ದೀರಿ ಎಂದರೆ ಸರಿ. 2016 ರಲ್ಲಿ ಪಾಲುವಾಟ್ನಿ ಕೇಳಲು ನಿಮ್ಮ ತವರುಮನೆಗೆ ಬಂದಿದ್ದೀರಿ ಎಂದರೆ ಸರಿ. ಆ ಸಮಯದಲ್ಲಿ ಊರಿನ ಹಿರಿಯರಾದ ದೇವರೆಡ್ಡಿ ಬಿರಸಲ್, ಶಂಬಣ್ಣ ಗುಡಿಸಾಗರ, ಯಲ್ಲಪ್ಪ ಪೂಜಾರ, ನಿಂಗಪ್ಪ ಅಮಾಗಿ, ಅಮೃತ ಜಿಂದಗಿ ರವರು ಸೇರಿದ್ದರು ಎಂದರೆ ಸರಿಯಲ್ಲ. ಸದರಿ ಹಿರಿಯರ ಸಮಕ್ಷಮ ಹಿಂದೆ ನಿಮ್ಮ ತಂದೆ ಮತ್ತು ಸಹೋದರ ಕಡೆಯಿಂದ ಪಡೆದ ಸಾಲವನ್ನು ಒಪ್ಪಿಕೊಂಡು ಮತ್ತೆ ತಲಾ ರೂ. 1,50,000/- ಹಿರಿಯರ ಸಮಕ್ಷಮ ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಹಕ್ಕು ಬಿಟ್ಟು ಕೊಟ್ಟಿದ್ದರಿಂದ 2 ನೇ ಪ್ರತಿವಾದಿ ಹೆಸರು ಪಹಣಿಯಲ್ಲಿ ಬಂದಿದೆ ಎಂದರೆ ಸರಿಯಲ್ಲ. ಚನ್ನಬಸಪ್ಪ ನಿಮಗೆ ಮತ್ತು ತಿಪ್ಪವ್ವಳಿಗೆ ಮಾಡಿದ ಸಾಲ ನಿಮಗೂ ಬಾಧ್ಯವಾಗಿದೆ ಎಂದರೆ ಸಾಕ್ಷಿ ನಮ್ಮ ಅಣ್ಣ ಚೆನ್ನಬಸಪ್ಪ ಕುಡಿತಿದ್ದ, ಅದಕ್ಕೆ ಸಾಲ ಮಾಡಿರಬಹುದು ಎಂದು ಹೇಳುತ್ತಾರೆ. ಚನ್ನಬಸಪ್ಪ ಕುಡಿಯುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೀರಿ, ತಿಪ್ಪವ್ವಳ ಗಂಡನ

ಸಾಲ ತೀರಿಸಲು ಸಾಲ ಮಾಡಿದ್ದ ಎಂದರೆ ಸರಿಯಲ್ಲ. ರೇಣವ್ವ ಸಂಬಂಧದಲ್ಲಿ ನಿಮಗೆ ಮಗಳಾಗಬೇಕು ಎಂದರೆ ಸರಿ. ಚೆನ್ನಬಸಪ್ಪ ಮತ್ತು ರೇಣವ್ವ ರಿಗೆ ಮಕ್ಕಳು ಇಲ್ಲ ಎಂದರೆ ಸರಿ. ಚೆನ್ನಬಸಪ್ಪನಿಗೆ ಮಕ್ಕಳು ಇರಲಿಲ್ಲ, ಆದ ಕಾರಣ ಸಾಲ ಮಾಡಲು ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಚೆನ್ನಪ್ಪ ಮಾಡಿದ ಸಾಲಕ್ಕೆ ನೀವು ಮತ್ತು ತಿಪ್ಪವ್ವ ಭಾದ್ಯರಾಗಿದ್ದೀರಿ ಎಂದರೆ ಸರಿಯಲ್ಲ. ದಾವೆ ದಾಖಲಿಸಲು ನಮ್ಮ ವಕೀಲರಿಗೆ ನಾನು ಮತ್ತು ತಿಪ್ಪವ್ವ ಸೇರಿ ಮಾಹಿತಿ ನೀಡಿದ್ದೇವೆ. ತಿಪ್ಪವ್ವ ನಿಮ್ಮಗಿಂತ ಹಿರಿಯಳು ಆಗಿದ್ದಾಳೆ, ಆಕೆಗೆ ಸಾಲ ಮಾಡಿದ ಎಲ್ಲಾ ವಿಷಯ ಗೊತ್ತಿದ್ದೆ, ಅವಳನ್ನು ಸಾಕ್ಷಿ ಮಾಡಿಸದರೆ ಸತ್ಯ ಹೊರಬೀಳುತ್ತದೆ ಎಂದು ನಿಮಗೆ ಗೊತ್ತಿದೆ ಎಂದರೆ ಸಾಕ್ಷಿ ಅವಳು ಇಲ್ಲಿಯೇ ಇದ್ದಾಳೆ ನೀವು ಕೇಳಿಕೊಳ್ಳಿ ಎಂದು ಹೇಳುತ್ತಾರೆ. ಎಲ್ಲಾ ಸಾಲ ಮಾಡಿದ್ದು ಗೊತ್ತಿದ್ದರೂ ಸಹಿತ ಮೇಲೆ ಹೇಳಿದ ಎಲ್ಲಾ ವಿಷಯ ಮುಚ್ಚಿಟ್ಟು, ಪಾಲುವಾಟ್ನಿ ಕೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
04.12.2024
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**